ಮನೆ ಬಾಗಿಲಲ್ಲೇ ಸೇವಾ ಸೌಲಭ್ಯ

ಗ್ಯಾಸ್ ಸ್ಟವ್, ಮಿಕ್ಸಿ, ಕುಕ್ಕರ್ ಜಾರ್, ಪಂಪ್ ಸ್ಟವ್ ಮತ್ತಿತರ ಅಡಿಗೆ ಮನೆಯಲ್ಲಿ ಬಳಸುವ ಸಾಧನಗಳ ದುರಸ್ತಿಯನ್ನು ನಿಮ್ಮ ಮನೆ ಬಾಗಿಲಲ್ಲೇ ಮಾಡಿಕೊಡಲಾಗುವುದು. ದೂರವಾಣಿ ಕರೆ ಮಾಡಿ ಸಂಪರ್ಕಿಸಿದ ಅರ್ಧ ಗಂಟೆಯೊಳಗೆ ಸೇವೆ ಲಭ್ಯ. ಅಗತ್ಯವಾದಲ್ಲಿ ಸಂಪರ್ಕಿಸಿ

ಮಂಜು– 953530417, 8618187339

13ನೇ ವರ್ಷದಲ್ಲಿ

ಹಾಸನ ವಾಣಿ

http://hassanvani.epapertoday.com ಸಂಪಾದಕರು ಲೀಲಾವತಿ E-mail:hassanvani@gmail.com

ಹಾಸನವಾಣಿ ಕನ್ನಡ ದಿನಪತ್ರಿಕೆ DAILY ಸಂಪುಟ:13 ಸಂಚಿಕೆ 186, ಶನಿವಾರ, 09–09–2017,ದೂ.ಸಂಖ್ಯೆ 265898,ಬೆಲೆ ರೂ 1.50, ಪುಟ 4 RNI-16681/2004 KA/SK/HSN-/753/2017-2019

ಗೌರಿಲಂಕೇಶ್ ಹತ್ಯೆ: ಸೆ.10ಕ್ಕೆ ಸಂತಾಪ

ಬೆಂಗಳೂರು: ಹಿರಿಯ ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಪತ್ರಕರ್ತೆಯರ ಸಂಘದಿಂದ ಸೆಪ್ಟಂಬರ್10 ರ ಭಾನುವಾರ ಬೆಂಗಳೂರಿನ ಪ್ರೆಸ್‌ಕ್ಲಬ್‌ನಲ್ಲಿ ಬೆಳಿಗ್ಗೆ 11.30ಕ್ಕೆ ಶ್ರದ್ದಾಂಜಲಿ ಸಭೆ ಹಮ್ಮಿಕೊಳ್ಳಲಾಗಿದೆ. ರಾಜ್ಯದ ನಾನಾ ಜಿಲ್ಲೆಗಳಿಂದ ಪತ್ರಕರ್ತೆಯರು ಸಭೆಗೆ ಹಾಜರಾಗುವಂತೆ ಸಂಘದ ಅಧ್ಯಕ್ಷೆ ತಿಳಿಸಿದ್ದಾರೆ.

ಕಥಾ ಕಮ್ಮಟ

ಹಾಸನ:ಸೆ,8– ಜಿಲ್ಲಾ ಲೇಖಕಿ ಯರ ಬಳಗ ಹಾಗೂ ಕೆಂಪು ಚೆಲುವರಾಜಮ್ಮಣ್ಣಿ ಮಹಿಳಾ ಸಮಾಜ , ಹಾಸನ. ಇವರ ಸಂಯುಕ್ತ ಆಶ್ರಯದಲ್ಲಿ ಸಾಹಿತ್ಯ ರಚನಾ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮದ ಡಿ ಸೆ.10 ರ ಭಾನುವಾರ ದಂದು ಎಸ್. ವಿ. ರಂಗಣ್ಣ ರಸ್ತೆ (ಸಹ್ಯಾದ್ರಿ ಚಿತ್ರ ಮಂದಿರದ ಪಕ್ಕ) ಇಲ್ಲಿ ಕಥಾ ಕಮ್ಮಟವನ್ನು ಏರ್ಪಡಿಸಲಾಗಿದೆ.

ಕನ್ನಡ ಸಾಹಿತ್ಯ ಪ್ರಕಾರ ದಲ್ಲಿ – ಕಥಾ ಬರವಣಿಗೆಯ ಶೈಲಿ ಪರಿಚಯದ ಈ ಕಾರ್ಯಾಗಾರಕ್ಕೆ ಜಿಲ್ಲೆಯ ಸಾಹಿತ್ಯಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಜಿಲ್ಲಾ ಲೇಖಕಿಯರ ಬಳಗ ಕೋರಿದೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: 8123827811,8660329297

ಕೇಂದ್ರ ಸಚಿವ ರವಿಶಂಕರ್ ಪ್ರಸಾದ್‌ಗೆ ರಾಮಲಿಂಗಾ ರೆಡ್ಡಿ ತಿರುಗೇಟು

ಬೆಂಗಳೂರು:ಸೆ,8– ಕಳೆದ ಮಂಗಳವಾರ ರಾತ್ರಿ ಹತ್ಯೆಯಾದ ಹಿರಿಯ ಪತ್ರಕರ್ತೆ ಗೌರಿ ಲಂಕೇಶ್ ಅವರಿಗೆ ಬೆದರಿಕೆ ಇದ್ದರೂ ಕರ್ನಾಟಕ ಸರ್ಕಾರ ಏಕೆ ಸೂಕ್ತ ಭದ್ರತೆ ನೀಡಲಿಲ್ಲ ಎಂದು ಪ್ರಶ್ನಿಸಿದ್ದ ಕೇಂದ್ರ ಸಚಿವ ರವಿಶಂರ್ಕ ಪ್ರಸಾದ್ ಅವರು ಗೃಹ ಸಚಿವ ರಾಮಲಿಂಗಾ ರೆಡ್ಡಿ ಅವರು ಶುಕ್ರವಾರ ತಿರುಗೇಟು ನೀಡಿದ್ದಾರೆ.

ರವಿಶಂಕರ್ ಪ್ರಸಾದ್ ಅವರಿಗೆ ಹತ್ಯೆಯಾದ ಪತ್ರಕರ್ತೆಯ ಬಗ್ಗೆ ಮಾಹಿತಿ ಇಲ್ಲ. ಗೌರಿ ಲಂಕೇಶ್ ಅವರು ಯಾವತ್ತೂ ಭದ್ರತೆ ಕೇಳಿರಲಿಲ್ಲ ಎಂದು ರಾಮಲಿಂಗಾ ರೆಡ್ಡಿ ಅವರು ಪಿಟಿಐಗೆ ತಿಳಿಸಿದ್ದಾರೆ.

ಗೌರಿ ಲಂಕೇಶ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅಥವಾ ಡಿಜಿಪಿ ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳನ್ನು ಭೇಟಿ ಮಾಡಿದಾಗ ಭದ್ರತೆ ಒದಗಿಸುವಂತೆ ಕೇಳಿಕೊಂಡಿಲ್ಲ. ಒಂದು ವೇಳೆ ಅವರು ಭದ್ರತೆ ಕೇಳಿದ್ದರೆ ನಾವು ಖಂಡಿತ ನೀಡುತ್ತಿದ್ದೇವೆ. ಭದ್ರತೆ ಕೇಳಿದರೆ ಯಾವುದೇ ಸರ್ಕಾರ ಅದನ್ನು ನಿರಾಕರಿಸುವುದಿಲ್ಲ ಎಂದಿದ್ದಾರೆ.

ಗೌರಿ ಲಂಕೇಶ್ ಹತ್ಯೆಯ ನಂತರ ಭದ್ರತೆ ಕೇಳದಿದ್ದರೂ ಕೆಲವು ಬುದ್ಧಿಜೀವಿಗಳಿಗೆ ಭದ್ರತೆ ಒದಗಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ ಎಂದು ಗೃಹ ಸಚಿವರು ತಿಳಿಸಿದ್ದಾರೆ.

ಇಂದು ಬೆಳಗ್ಗೆ ದೆಹಲಿಯಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ್ದ ರವಿಶಂಕರ್ ಪ್ರಸಾದ್ ಅವರು, ಗೌರಿ ಲಂಕೇಶ್ ಅವರಿಗೆ ಸೂಕ್ತ ರಕ್ಷಣೆ ನೀಡುವಲ್ಲಿ ರಾಜ್ಯ ಸರ್ಕಾರದ ವಿಫಲವಾಗಿದೆ. ನಕ್ಸಲರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಗೌರಿ ಪ್ರಯತ್ನಿಸುತ್ತಿದ್ದರು ಎಂದು ಅವರ ಸಹೋದರ ಇಂದ್ರಜಿತ್ ಲಂಕೇಶ್ ನೀಡಿರುವ ಹೇಳಿಕೆಯ ವರದಿಗಳನ್ನು ಗಮನಿಸಿದರೆ, ನಕ್ಸಲರಲ್ಲೂ ಗೌರಿ ಅವರ ಕಾರ್ಯದ ಕುರಿತು ವಿರೋಧವಿತ್ತು ಎನ್ನಲಾಗಿದೆ. ಈ ಕುರಿತು ಸಿಎಂ ಸಿದ್ದರಾಮಯ್ಯ ನೇತೃತ್ವದ ಸರ್ಕಾರಕ್ಕೆ ತಿಳಿದಿದ್ದರೂ ಸೂಕ್ತ ಭದ್ರತೆಯನ್ನು ಏಕೆ ಒದಗಿಸಲಿಲ್ಲ?’ಎಂದು ಪ್ರಶ್ನಿಸಿದ್ದರು.

ಡೇರಾದಲ್ಲಿ ಐಷಾರಾಮಿ ಕಾರು, ಹಳೆ ನೋಟ್ ಜಪ್ತಿ, ರೂಮ್ ಗಳಿಗೆ ಬೀಗ ಜಡಿದ ಅಧಿಕಾರಿಗಳು

ಚಂಡೀಗಢ:ಸೆ,8– ಅತ್ಯಾಚಾರ ಪ್ರಕರಣದಲ್ಲಿ ಜೈಲು ಪಾಲಾಗಿರುವ ಬಾಬಾ ರಾಮ್ ರಹೀಮ್ ಗುರ್ಮಿತ್ ಸಿಂಗ್ ರ ಸಿರ್ಸಾದಲ್ಲಿರುವ ಡೇರಾ ಸಚ್ಚಾ ಸೌಧದ ಆಶ್ರಮದಲ್ಲಿ ನೋಂದಣಿಯಾಗದ ಐಷಾರಾಮಿ ಕಾರು ಹಾಗೂ ನಿಷೇಧಿತ ನೋಟ್ ಗಳನ್ನು ಜಪ್ತಿ ಮಾಡಲಾಗಿದೆ. ಅಲ್ಲದೆ ಅಲ್ಲಿನ ಕೆಲವು ರೂಮ್ ಗಳಿಗೆ ಬೀಗ ಜಡಿದಿರುವುದಾಗಿ ಶುಕ್ರವಾರ ಅಧಿಕಾರಿಗಳು ತಿಳಿಸಿದ್ದಾರೆ.

ಇಂದು ಬೆಳಗ್ಗೆ ಡೇರಾ ಆಶ್ರಮದ ಮೇಲೆ ದಾಳಿ ನಡೆಸಿದ್ದ ಜಿಲ್ಲಾಡಳಿತ ಹಾಗೂ ಭದ್ರತಾ ಪಡೆಗಳು, ಹೈಕೋರ್ಟ್ ಆದೇಶದಂತೆ ಆಶ್ರಮದಲ್ಲಿ ಶೋಧಕಾರ್ಯ ನಡೆಸಿದವು. ಈ ವೇಳೆ ನೋಂದಣಿಯಾಗದ ಐಷಾರಾಮಿ ಕಾರೊಂದು ಹಾಗೂ ನಿಷೇಧಿತ ನೋಟ್ ಗಳು ಪತ್ತೆಯಾಗಿದ್ದು, ಅವುಗಳನ್ನು ಜಪ್ತಿ ಮಾಡಲಾಗಿದೆ ಎಂದು ಹರಿಯಾಣ ಸಾರ್ವಜನಿಕ ಸಂಪರ್ಕ ಇಲಾಖೆ ಉಪ ನಿರ್ದೇಶಕ ಸತೀಶ್ ಮೆಹ್ರಾ ಅವರು ಹೇಳಿದ್ದಾರೆ.

ಇಂದು ಜಿಎಸ್‌ಟಿ ಕುರಿತು ಮಾಹಿತಿ ಕಾರ್ಯಕ್ರಮ

DIST. WORKING JOURNALIST ASSOCIATION (R)

ಹಾಸನ:ಸೆ,8– ನಗರದ ಎಂ.ಜಿ. ರಸ್ತೆ ರವೀಂದ್ರ ನಗರದಲ್ಲಿರುವ ಮಹಾವೀರ ಭವನದಲ್ಲಿ ಇಂದು ಶನಿವಾರ ಮದ್ಯಾಹ್ನ ಜಿಲ್ಲಾ ವಾಣಿಜ್ಯ, ಕೈಗಾರಿಕ ಮಂಡಳಿ ಪದಗ್ರಹಣ ಹಾಗೂ ಜಿಎಸ್‌ಟಿ ಬಗ್ಗೆ ಮಾಹಿತಿ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಮಂಡಳಿಯ ಕಾರ್ಯದರ್ಶಿ ದಲಿಚಂದ್ ಎಂ.ಜೈನ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ಇಂದು ಶನಿವಾರ ಮದ್ಯಾಹ್ನ 2:30ಕ್ಕೆ ನಗರದ ಮಹಾವೀರ ಭವನದಲ್ಲಿ 2017–18 ಮತ್ತು 2018–19ನೇ ಸಾಲಿಗಾಗಿ ಮಂಡಳ ಪದಾಧಿಕಾರಿಗಳ ಪದಗ್ರಹಣ ಬೃಹತ್ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ. ಹಿರಿಯ ಸಮಾಜ ಜೀವಿಗಳು, ಕೈಗಾರಿಕೋದ್ಯಮಿಗಳು ಜಿ.ಎಲ್. ಮುದ್ದೆಗೌಡ ಹಾಗೂ ವಾಣಿಜ್ಯೋದ್ಯಮಿ ಹಾಗೂ ಮಂಡಳದ ಸಂಸ್ಥಾಪಕ ಹೆಚ್.ಎಸ್. ರವಿಕುಮಾರ್ ಮಾರ್ಗದರ್ಶನದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ನೋಟು ಅಪಮೌಲ್ಯದಿಂದ ಶೇ.50ರಷ್ಟು ಉದ್ದಿಮೆ ನಷ್ಟವಾಗಿದ್ದು, ಸುಧಾರಣೆ ಕಂಡಕೊಳ್ಳಲು ಸಾಧ್ಯವಾಗಿಲ್ಲ. ಇದರಿಂದ ರೈತರು ಸಹ ತೊಂದರೆಯನ್ನು ಅನುಭವಿಸು ವಂತಾಗಿದೆ.ಇನ್ನು ಸುಧಾರಣೆಯನ್ನು ಕಂಡುಕೊಳ್ಳಲು ಸಾಧ್ಯವಾಗಿಲ್ಲ ಎಂದು ಹೇಳಿದರು.ಹೀಗಾಗಿ ಸೆಪ್ಟಂಬರ್.9ರಂದು ಜಿಎಸ್‌ಟಿ ಬಗ್ಗೆ ಅತ್ಯುಪಯುಕ್ತ ಮಾಹಿತಿ ನೀಡುವ ಕಾರ್ಯಕ್ರಮ ಮತ್ತು ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಮಂಡಳಿಯ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಆರು ತಿಂಗಳೊಳಗೆ ಭೂ ಮಂಜೂರಾತಿ ಗೊಂದಲ ಇತ್ಯರ್ಥ:ಜಿಲ್ಲಾಧಿಕಾರಿ

ಹಾಸನ:ಸೆ,8– ಜಿಲ್ಲೆಯಲ್ಲಿನ ಹೇಮಾವತಿ ಯೋಜನಾ ನಿರಾಶ್ರಿತರಿಗೆ ಭೂ ಮಂಜೂರಾತಿ ವಿಷಯದಲ್ಲಿ ಇರುವ ಗೊಂದಲಗಳನ್ನು ಮುಂದಿನ 6 ತಿಂಗಳೊಳಗೆ ಇತ್ಯರ್ಥ ಪಡಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ದಾಸರಿಯುವರು ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಮೇಲಿನ ದೌರ್ಜನ್ಯ ತಡೆಗೆ ರಚಿಸಲಾಗಿರುವ ಜಿಲ್ಲಾ ಮಟ್ಟದ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು 1975 ನೇ ಇಸವಿಯಿಂದಲೂ ಹೇಮಾವತಿ ಜಲಾಶಯಕ್ಕಾಗಿ ಭೂಮಿ ಕಳೆದುಕೊಂಡವರ ಪುನರ್ ವಸತಿ ಸಮಸ್ಯೆ ಇಂದಿಗೂ ಮುಂದುವರೆದಿರುವುದು ವಿಷಾದನೀಯ ಇದನ್ನು ಶೀಘ್ರದಲ್ಲೇ ಸಂಪೂರ್ಣವಾಗಿ ಬಗೆ ಹರಿಸಲಾಗುವುದು ಎಂದರು.

ಹೇಮಾವತಿ ಹಾಗೂ ಇತರೆ ಯೋಜನಾ ನಿರಾಶ್ರಿತರಿಗಾಗಿ ಜಿಲ್ಲೆಯಲ್ಲಿ 85,000 ಎಕರೆ ಮೀಸಲಿರಿಸಲಾಯಿತು, ಈವರೆಗೆ 25,000 ಎಕರೆ ಮಂಜೂರಾಗಿದೆ. ಅನೇಕ ಭೂಮಾಫಿಯಾ ಜನರು ರೈತರ ಮೂಲಕ ಮುಳುಗಡೆ ಪತ್ರ ಪಡೆದು ಜಮೀನು ಪಡೆಯುತ್ತಿರುವ ಆರೋಪ’ಗಳು ಕೇಳಿಬರುತ್ತಿವೆ . ಕೆಲ ನೈಜ ರೈತರು, ದಲಿತರಿಗೆ ಪರಿಹಾರ ದೊರೆತಿಲ್ಲ ಎಂಬ ಮನವಿಗಳಿವೆ ಲೋಪಗಳನ್ನು ಸರಿಪಡಿಸಿ ಎಲ್ಲರ ಅರ್ಜಿಗಳನ್ನು ವಿಲೇವಾರಿ ಮಾಡಲಾಗುವುದು ಎಂದರು.

ಸಕಲೇಶಪುರ–ಆಲೂರು ಕ್ಷೇತ್ರದ ಶಾಸಕರಾದ ಹೆಚ್.ಕೆ.ಕುಮಾರ ಸ್ವಾಮಿ ಮಾತನಾಡಿ ಹೇಮಾವತಿ ಜಲಾಶಯಕ್ಕಾಗಿ ಭೂಮಿ ಕಳೆದುಕೊಂಡಿರುವಂತವರ ಸಮಸ್ಯೆಗಳು ಆದಷ್ಟು ಬೇಗ ಪರಿಹಾರವಾಗಬೇಕು. ಕೆಲವರು 30 ವರ್ಷಗಳ ಕಾಲ ಸುಮ್ಮನಿದ್ದು ಈಗ ಅರ್ಜಿ ಸಲ್ಲಿಸುತ್ತಿರುವುದು ಅನುಮಾನಗಳಿಗೆ ಕಾರಣವಾಗುತ್ತಿದೆ. ಅನೇಕ ಲ್ಯಾಂಡ್ ಡೆವಲಪರ್ಸ್‌ಗಳು ನೇರವಾಗಿ ರೈತರಿಂದ ಮುಳುಗಡೆ ದೃಡೀಕರಣ ಪತ್ರ ಹಾಗೂ ಭೂಮಿ ಖರೀದಿ ಮಾಡುತ್ತಿರುವ ಪ್ರಕರಣಗಳು ಇವೆ, ನೈಜ ನಿರಾಶ್ರಿತರಿಗೆ, ಅರ್ಹರಿಗೆ ಭೂಮಿ ದೊರೆಯಬೇಕು ಹಣವಂತರ ಹಸ್ತಕ್ಷೇಪ ತಪ್ಪಬೇಕು ಎಂದರು.

ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳ ವಿಲೇವಾರಿ ಬೇಗ ನಡೆಯಬೇಕು, ದಲಿತರು ಹೆಚ್ಚಾಗಿ ವಾಸವಿರುವ ಪ್ರದೇಶಗಳಲ್ಲಿ ಸ್ಮಶಾನ, ಸಮುದಾಯ ಶೌಚಾಲಯ ಅಭಿವೃದ್ದಿಗೆ ಜಿಲ್ಲೆಯ ಅಧಿಕಾರಿಗಳು ಗಮನ ಹರಿಸಬೇಕು ಎಂದರು.

ಸಮಿತಿ ಸದಸ್ಯರಾದ ನಾರಾಯಣ ದಾಸ್ ಅವರು ಹೊಳೆನರಸೀಪುರ ತಾಲ್ಲೂಕು ಹರಿಹರಪುರ ಗ್ರಾಮದ ಉಡುಸಲಮ್ಮ ಜಾತ್ರೆಯಲ್ಲಿ ನಡೆಯುತ್ತಿರುವ ಪರಿಶಿಷ್ಟ ಸಮುದಾಯದವರ ಸಿಡಿ ಆಚರಣೆ ತಡೆಯಬೇಕು ಎಂದು ಒತ್ತಾಯಿಸಿದರು. ಈ ಬಗ್ಗೆ ಮುಂದಿನ ಫೆಬ್ರವರಿ ಹಾಗೂ ಮಾರ್ಚ್ ತಿಂಗಳಲ್ಲಿ ಗ್ರಾಮದಲ್ಲಿ ಅರಿವು ಅಭಿಯಾನ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ದಾಸರಿಯವರು ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಯವರಿಗೆ ಸೂಚನೆ ನೀಡಿದರು.

ಸಮಿತಿಯ ಮತ್ತೊಬ್ಬ ಸದಸ್ಯರಾದ ಹೂರಾಜ್ ಅವರು ಅಂಗಡಿಹಳ್ಳಿ ಗ್ರಾಮದಲ್ಲಿ ಬುಡಕಟ್ಟು ಸಮುದಾಯದವರು ಬಯಲು ಬಹಿರ್ದೆಸೆ ಸಂದರ್ಭ ಅನುಭವಿಸುತ್ತಿರುವ ಸಂಕಷ್ಟ, ಸರ್ಕಾರಿ ಭೂಮಿ ಒತ್ತುವರಿ ತೆರವು ವಿಚಾರದಲ್ಲಿ ಆಗಿರುವ ವಿಳಂಬದ ಬಗ್ಗೆ ಗಮನ ಸೆಳೆದರು, ಈ ಬಗ್ಗೆ ತಹಶೀಲ್ದಾರರ ಮೂಲಕ ಅಗತ್ಯ ವರದಿ ಪಡೆಯಲಾಗುವುದು ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಸಮಿತಿ ಸದಸ್ಯರಾದ ಸೋಮಶೇಖರ್ ಅವರು ಪಿ.ಟಿ.ಸಿ.ಎಲ್ ಅರ್ಜಿಗಳ ವಿಲೇವಾರಿಯಲ್ಲಿ ಆಗುತ್ತಿರುವ ವಿಳಂಬದ ಬಗ್ಗೆ ಪ್ರಸ್ತಾಪಿಸಿದರು. ವಿಜಯ ಕುಮಾರ್ ಅವರು ಬಾಬು ಜಗ ಜೀವನ್ ರಾವ್ ಭವನ ನಿರ್ಮಾಣ ವಿಳಂಬದ ಬಗ್ಗೆ ಪ್ರಸ್ತಾಪಿಸಿದರು.

ಸದಸ್ಯರಾದ ಮಹಂತಪ್ಪ, ಮಂಜೇಗೌಡ, ಮಹಲಿಂಗಪ್ಪ ಮತ್ತಿತರರು ಚರ್ಚೆಯಲ್ಲಿ ಪಾಲ್ಗೊಂಡರು..

ನೀರು ಹರಿಸದಿದ್ದರೆ ಉಗ್ರಹೋರಾಟ

ಅರಸೀಕೆರೆ:ಸೆ,8– ಹೇಮಾ ವತಿ ನದಿ ನೀರಿನ ಹಂಚಿಕೆಯಲ್ಲಿ ರಾಜ್ಯ ಸರ್ಕಾರ ಅನ್ಯಾಯವನ್ನು ಮಾಡುತ್ತಿದ್ದು ಇದೇ ಜಿಲ್ಲೆಯಲ್ಲಿರುವ ಅರಸೀಕೆರೆಯ ಕೆರೆಗಳಿಗೆ ನೀರನ್ನು ತುಂಬಿಸದೇ ಪಕ್ಕದ ಬೇರೆ ಜಿಲ್ಲೆಗಳಿಗೆ ಮೊದಲ ಆದ್ಯತೆ ನಿಡುತ್ತಿರು ವುದು ಸರಿಯಲ್ಲ ಮೊದಲು ನಮ್ಮ ಕೆರೆಗಳಿಗೆ ನೀರನ್ನು ಬಿಡ ಬೇಕೆಂದು ಒತ್ತಾಯಿಸಿ ದರಲ್ಲದೇ ಶೀಘ್ರ ನಿರ್ಧಾರ ವನ್ನು ಕೈಗೊಳ್ಳ ದಿದ್ದರೇ ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದು ಶಾಸಕ ಕೆ.ಎಂ. ಶಿವ ’ಲಿಂಗೇಗೌಡ ಎಚ್ಚರಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಶಾಸಕರು, ಕಳೆದ ಕೆಲವಾರು ವರ್ಷಗಳಿಂದ ತಾಲ್ಲೂಕಿನಲ್ಲಿ ಮಳೆ ಇಲ್ಲದೇ ಭೂಮಿ ಬರಡಾ ಗಿದೆ ಅಲ್ಲದೇ ಇಲ್ಲಿ ದನಕರುಗಳಿಗೂ ಮೇವಿನ ಸಮಸ್ಯೆ ಉಂಟಾಗಿದ್ದು ಕುಡಿಯುವ ನೀರಿಗಾಗಿ ಜನ ಪರಿತಪಿಸುತ್ತಿದ್ದಾರೆ ಇಂತಹ ಕಷ್ಟದ ಹಾದಿಯಲ್ಲಿರುವ ತಾಲ್ಲೂಕಿನ ಜನರ ಸಮಸ್ಯೆಗೆ ಮೊದಲು ಸ್ಪಂದಿಸಬೇಕಾಗಿದ್ದ ರಾಜ್ಯ ಸರ್ಕಾರ ರಾಜಕೀಯ ಪ್ರಾಬಲ್ಯತೆಯನ್ನು ಹೊಂದಿರುವ ಜಿಲ್ಲೆಗಳಿಗೆ ಮೊದಲು ನೀರನ್ನು ಬಿಡುವ ಮೂಲಕ ನಮಗೆ ಅನ್ಯಾಯ ಮಾಡುತ್ತಿದ್ದಾರೆ ಎಂದರು.

ಗೌರಿಲಂಕೇಶ್ ಹತ್ಯೆಖಂಡಿಸಿ ಪ್ರತಿಭಟನೆ

ಪ್ರತಿಭಟನೆ
SOCIAL DEMOCRATIC PARTY OF INDIA, HASSAN

ಹಾಸನ:ಸೆ,8–ಹಿರಿಯ ಪತ್ರಕರ್ತೆ, ಜಾತ್ಯಾತೀತ ಪ್ರತಿಪಾದಕಿ ಸ್ತ್ರೀವಾದಿ ಗೌರಿ ಶಂಕರ್ ಹತ್ಯೆ ಖಂಡಿಸಿ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ವತಿಯಿಂದ ಇಂದು ಪ್ರತಿಭಟನೆ ನಡೆಸಲಾಯಿತು.

ನಗರದ ಹೇಮಾವತಿ ಪ್ರತಿಮೆ ಬಳಿ ಒಂದು ಗೂಡಿದ ಸಂಘದ ಕಾರ್ಯಕರ್ತರು ಹತ್ಯೆಕೋರರ ವಿರುದ್ದ ಘೋಷಣೆ ಕೂಗುತ್ತಾ ನಗರದ ಮುಖ್ಯರಸ್ತೆಯಲ್ಲಿ ಸಾಗಿದರು. ದೇಶದಲ್ಲಿ ಬುದ್ದಿವಂತರನ್ನು ಮೌಢ್ಯವಿರೋಧಿಸುವ ಕಂದಾಚಾರಗಳನ್ನು ಖಂಡಿಸುವ ವಿಚಾರ ವಾದಿಗಳನ್ನು ನಿರ್ದಯವಾಗಿ ಹತ್ಯೆಗೈಯುವ ಸರಣಿ ಮುಂದುವರೆದಿದೆ.ಇದು ಆತಂಕದ ಸಂಗತಿ.ಪತ್ರಕರ್ತೆ ಗೌರಿಲಂಕೇಶ್ ಅವರ ಹತ್ಯೆಯು ಇಂತಹ ವೈಚಾರಿಕ ಮನೋಬಾವವುಳ್ಳವರನ್ನು ಮುಗಿಸುತ್ತೇವೆ ಎಂಬುದರ ಸಂಕೇತವಾಗಿದೆ ಎಂದು ದೂರಿದರು.ಪ್ರತಿಭಟನೆಯಲ್ಲಿ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ಅಧ್ಯಕ್ಷ ಫೈರೋಜ್ ಪಾಶ, ಪ್ರಧಾನ ಕಾರ್ಯದರ್ಶಿ ಸಿದ್ದಿಖ್ ಅನೆಮಹಲ್, ಉಪಾಧ್ಯಕ್ಷ ಅಮೀರ್ ಜಾನ್, ಮುಬಾಷೀರ್ ಅಹಮ್ಮದ್ ಸೇರಿದಂತೆ ಇತರರು ಭಾಗವಹಿಸಿದ್ದರು.

‘ಕ್ರೀಡಾಮನೋಭಾವ ಬೆಳೆಸಿಕೊಳ್ಳಿ’

2017-18
ದಸರಾ ಕ್ರೀಡಾಕೂಟ

ಹಾಸನ:ಸೆ,8–
ಆಟವಾಡಿ ರಾಜ್ಯ
ಜಿಲ್ಲಾಧಿಕಾರಿಗಳಾದ
ಸಬಲೀಕರಣ ಮತ
ಜಿಲ್ಲಾ ಕ್ರೀಡಾಂಗಣ
ಜಿಲ್ಲಾ ಮಟ್ಟದ ದಸ
ಕಾರ್ಯಕ್ರಮ
ಸಹಾಯಕ ನಿರ್ದೇ
ಮಾತನಾಡುತ್ತಾ ಜಿ
ಜಿಲ್ಲಾ ಮಟ್ಟದ ದಸ
ಮಕ್ಕಳು ಕ್ರೀಡೆ
ಕಾರ್ಯ ಕ್ರಮದ
ಅನಿಲ್‌ಕುಮಾರ್,

[redacted]

ಪಾಲ್ಗೊಂಡು ಉತ್ತಮವಾಗಿ
ತರುವಂತೆ ಕ್ರೀಡಾಪಟುಗಳಿಗೆ
ಶುಭ ಹಾರೈಸಿದರು.ಯುವ
ಇವರ ಸಂಯುಕ್ತಾಶ್ರಯದಲ್ಲಿ
018 ನೇ ಸಾಲಿನ ಹಾಸನ
ಸಿ ಅವರು ಮಾತನಾಡಿದರು.
ಮತ್ತು ಕ್ರೀಡಾ ಇಲಾಖೆಯ
ಟ್ಟಿ ಅವರು ಪ್ರಾಸ್ತಾವಿಕವಾಗಿ
ಕ್ಕೂ ಹೆಚ್ಚು ವಿದ್ಯಾರ್ಥಿಗಳು
ವಹಿಸಿದ್ದಾರೆ.
ಡು ಗೆಲ್ಲುವಂತೆ ಹೇಳಿದರು.
ರಾದ ಡಾ: ಹೆಚ್.ಎಸ್.

ಬೇಸಾಯದ ಕ್ರಮಗಳನ್ನು ಹೆಚ್ಚು ಪ್ರಚಾರಗೊಳಿಸಿ:ರೋಹಿಣಿ ಸಿಂಧೂರಿ

ಹಾಸನ ಸೆ. 8: ಮಹಾ ಮಸ್ತಕಾಭಿಷೇಕದ ಸಮಯದಲ್ಲಿ ಅತಿಥಿ ಗಣ್ಯರಿಗೆ ಹಣ್ಣುಗಳ ಬುಟ್ಟಿ ಬದಲು ಹಾಸನದ ಪ್ರಚಲಿತ ತರಕಾರಿಗಳನಿಟ್ಟು ಕೊಡುವುದರಿಂದ ಜಿಲ್ಲೆಯ ತರಕಾರಿಗಳ ಪ್ರಾಮುಖ್ಯತೆ ಜೊತೆಗೆ ಸುಸ್ಥಿರ ಆಲೂಗೆಡ್ಡೆ ಬೇಸಾಯದ ವಿಧಾನ’ಗಳನ್ನು ಹಾಗೂ ವಿವಿಧ ತಂತ್ರಜ್ಞಾನಗಳ ಬಳಕೆಯ ಕುರಿತು ಹೆಚ್ಚು ಪ್ರಚಾರಗೊಳಿಸಿ ಎಂದು ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ದಾಸರಿ ಅವರು ಹೇಳಿದರು.

ಗ್ರೀನ್ ಇನ್ನೋವೇಷನ್ ಸೆಂಟರ್ ಇವರ ವತಿಯಿಂದ ಹೊನ್ನಾವರ ಗ್ರಾಮದ ಸಮುದಾಯ ಭವನದಲ್ಲಿ ಹಮ್ಮಿಕೊಂಡಿದ್ದ ಸುಸ್ಥಿರ ಆಲೂಗೆಡ್ಡೆ ಬೇಸಾಯದ ಸಮಾರೋಪ ಸಮಾರಂಭ ಕಾರ್ಯಕ್ರಮದಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಅವರು ರೈತರ ಸಮಸ್ಯೆಯನ್ನು ಆಲಿಸಿ ಆಲೂಗಡ್ಡೆ ಬೇಸಾಯದ ಕ್ರಮಗಳನ್ನು ಅದಷ್ಟು ಪ್ರಚಾರಗೊಳಿಸಿ, ಅಂತರಾಷ್ಟ್ರೀಯ ಮಟ್ಟದ ಕಂಪನಿಗಳು ಹಾಸನ ಜಿಲ್ಲೆಯಿಂದ ಆಲೂಗಡ್ಡೆ ಕೊಳ್ಳಲು ಬರುವಂತೆ ಮಾಡಿ ಇದರಿಂದ ರೈತರಿಗೂ ಅನುಕೂಲವಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಮಹಾ ಮಸ್ತಕಾಭಿಷೇಕದ ವಿಶೇಷ ಅಧಿಕಾರಿಗಳಾದ ವರಪ್ರಸಾದ್ ರೆಡ್ಡಿ ಮಾತನಾಡಿ ಪ್ರಸ್ತುತ ಸಮಾಜದಲ್ಲಿ ಸಾಮಾಜಿಕ ಜಾಲತಾಣಗಳು ಪ್ರಚಲಿತದಲ್ಲಿದ್ದು, ಈ ಬೇಸಾಯದ ಕ್ರಮಗಳನ್ನು ಜಾಲತಾಣಗಳ ಮೂಲಕ ರೈತರಿಗೆ ನೆರವಾಗುವ ರೀತಿಯಲ್ಲಿ ಪ್ರಚಾರಗೊಳಿಸಿ ಎಂದು ಸೂಚನೆ ನೀಡಿದರು.

ಗ್ರೀನ್ ಇನ್ನೋವೇಷನ್ ಸೆಂಟರ್‌ನ ಮುಖ್ಯಸ್ಥ ಡಾ. ಮಾನ್ಸ್ ಹೆರಮಾನ್ ಲಾಂಟಿಂಗ್ ಮಾತನಾಡಿ ಸುಸ್ಥಿರ ಆಲೂಗಡ್ಡೆ ಬೇಸಾಯದ ಯೋಜನೆಯನ್ನು ಹಾಸನದಲ್ಲಿ ಒಟ್ಟು 60 ಹಳ್ಳಿಗಳಲ್ಲಿ ಪ್ರಾರಂಭಿಸಿದ್ದು 25 ರೈತರ ಗುಂಪುಗಳನ್ನು ಮಾಡಿದ್ದು ಈ ತಂತ್ರಜ್ಞಾನದ ಕುರಿತು ತರಬೇತಿಯನ್ನು ನೀಡಲಾಗುತ್ತಿದ್ದು ಇದರ ಪ್ರಯೋಜನವನ್ನು ರೈತರು ಪಡೆಯಬೇಕೆಂದು ಹೇಳಿದರು.

ಕಾರ್ಯಕ್ರಮದಲ್ಲಿ ತೋಟಗಾರಿಕೆ ಇಲಾಖೆ ಉಪನಿರ್ದೇಶಕರಾದ ಸಂಜಯ್, ಕೃಷಿ ಮಹಾವಿದ್ಯಾಲಯದ ಡೀನ್ ಡಾ. ಎನ್. ಮಂಜುನಾಥ್, ಸೋಮನ ಹಳ್ಳಿ ಕವಲು ತೋಟಗಾರಿಕೆ ಸಂಶೋಧನ ಮತ್ತು ವಿಸ್ತರಣಾ ಕೇಂದ್ರ ಮುಖ್ಯಸ್ಥರು, ಹೊನ್ನಾವರ ಗ್ರಾಮ ಪಂಚಾಯತ್ ಅಧ್ಯಕ್ಷರು, ಗ್ರೀನ್ ಇನ್ನೋವೇಷನ್ ಸೆಂಟರ್ ಹಾಸನ ತಂಡದ ನಾಯಕ ರವೀಂದ್ರನಾಥ ರೆಡ್ಡಿ, ಮೇಲ್ವಿಚಾರಕರಾದ ಶಶಿಕಲಾ, , ಸಮಲೋಚಕರಾದ ಸುಹಾಸ್, ನಾಗಣ್ಣಗೌಡ ಮುಂತಾದವರು ಹಾಜರಿದ್ದರು.

ಜಿಲ್ಲಾ ಮಟ್ಟಕ್ಕೆ ಆಯ್ಕೆ

ಬೇಲೂರು:ಸೆ,8– ತಾಲ್ಲೂಕಿನ ಕನಾಯ್ಕನಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ 7ನೇ ತರಗತಿ ವಿದ್ಯಾರ್ಥಿನಿ ಕು.ಜಿ.ಮೃದುಲಾ, ಶಿಕ್ಷಣ ಇಲಾಖೆ ನಡೆಸಿದ ತಾಲ್ಲೂಕು ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಯುಲ್ಲಿ ಪಾಲ್ಗೊಂಡು, ಅಭಿನಯ ಗೀತೆ ಹಾಗೂ ಭಕ್ತಿಗೀತೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನಗಳಿಸಿ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಗೆ ಆಯ್ಕೆಗೊಂಡಿದ್ದಾರೆ.ಇವರ ಸಾಧನೆಗೆ ಶಾಲಾ ಸಿಬ್ಬಂದಿವರ್ಗ ಮತ್ತು ಕ್ಷಸ್ತರ್ ಮುಖ್ಯ ಶಿಕ್ಷಕರುಗಳು ಅಭಿನಂದಿಸಿದ್ದಾರೆ.

ಹೃದಯ ಶ್ರೀಮಂತಿಕೆಯ ಲಕ್ಷ್ಮಮ್ಮ: ಲಕ್ಷ ರೂ ಆಭರಣ ನೀಡಿ ಮಾನವೀಯತೆ ಮೆರೆದರು

ಹಾಸನ, ಸೆ.
ಆಕೆಯ ಹ
ಮಾಡುವುದು ಕೂ
ಸ್ವಾಮಿಗೌಡ ಕ್ರ
ಮನೆಯಲ್ಲಿ ಗ್ರಾ
ಹಳ್ಳಿಯ ಜನರ
ಬದುಕಿನಂತೆ ಬ
ಹಾಸಿ ಹೊದ
ಆದರೆ.......?
ಪ್ರೀತಿಯಲ್ಲಿ
ಗುಣದಲ್ಲಿ ಅಪ
ಪ್ರಾಮಾಣಿಕತೆ
ಶ್ರೀಮಂತರು. ಹ
ಕಿತ್ತನೆ ಗ್ರಾಮದಲ್ಲಿ
ದಂಪತಿಗಳು. ಅ

[redacted]

ತಿ ಲಕ್ಷ್ಮಮ್ಮ ಅತ್ಯಂತ
ವೀಯ ಮನಸ್ಸು
ದ್ದು, ಇದಕ್ಕೆ ಸಾಕ್ಷಿಯಂತೆ
ಪ್ರಕರಣ ಬೆಳಕಿಗೆ ಬಂದಿದೆ.
ಗ್ರಾಮದಲ್ಲಿ ಕಾರ್ಪೋ
ಬ್ಯಾಂಕ್‌ನ ಶಾಖೆಯಿದೆ.
ಊರಿನ ಬೀಕನಹಳ್ಳಿ
ಲೋಕೇಶ್ ಅವರ ಮಗ
ಸ್ವಾಮಿ ಇಲ್ಲಿ ಖಾತೆ
ರುಲ್ಲಿ ಬ್ಯಾಂಕ್ ನ ಲಾಕರ್
ದಿದ್ದಾರೆ. ಸೆ. 6ರಂದು
ಲಾಕರ್ ನಲ್ಲಿದ್ದ
ರು ಒಂದು ಲಕ್ಷರು
ದ 35ಗ್ರಾಂ ತೂಕದ
ಸರವನ್ನು ಪಡೆದು

ಕೊಂಡಿದ್ದು, ಜೋಬಿಗೆ ಹಾಕಿಕೊಂಡು ಮನೆಯುತ್ತ ಹೋಗಿದ್ದಾರೆ. ಆದರೆ ಮನೆಗೆ ಹೋಗಿ ನೋಡಿದಾಗ ಜೇಬಿನಲ್ಲಿ ಸರವೇ ಇಲ್ಲ. ಗಾಬರಿಯಿಂದ ತಾವು ಬಂದ ದಾರಿಯನ್ನೇ ನೋಡಿಕೊಂಡು ಬ್ಯಾಂಕ್‌ಗೆ ವಾಪಸ್ಸು ಬಂದಿದ್ದಾರೆ. ಕಣ್ಣಿನಲ್ಲಿ ನೀರು ತುಂಬಿಕೊಂಡು ಬ್ಯಾಂಕ್ ಸಿಬ್ಬಂದಿ ಸೇರಿದಂತೆ ಸ್ಥಳದಲ್ಲಿದ್ದವರನ್ನು ವಿಚಾರಿಸಿದ್ದಾರೆ.

ಬ್ಯಾಂಕ್ ಗೆ ಬರುತ್ತಿದ್ದ ಲಕ್ಷ್ಮಮ್ಮ ಅವರಿಗೆ ಮಾರ್ಗಮಧ್ಯೆ ಚಿನ್ನದ ಸರ ಸಿಕ್ಕಿದೆ. ಬ್ಯಾಂಕ್ ನಲ್ಲಿ ಗೋಳಾಡುತ್ತಿದ್ದ ರಂಗಸ್ವಾಮಿಯವರಿಗೆ ತಮಗೆ ಸರ ಸಿಕ್ಕಿರುವ ವಿಷಯ ತಿಳಿಸಿ ಸರವನ್ನು ನೀಡಿದ್ದಾರೆ. ಆಕೆಯ ಪ್ರಾಮಾಣಿಕತೆಗೆ ಮೆಚ್ಚುಗೆ ವ್ಯಕ್ತಪಡಿಸಿದ ಬ್ಯಾಂಕ್ ಮ್ಯಾನೇಜರ್ ಸೇರಿದಂತೆ ಸ್ಥಳದಲ್ಲಿದ್ದವರು ಸುಮಾರು 5000ರು ಬಹುಮಾನ ಕೊಡಲು ಮಂದಾಗಿದ್ದಾರೆ.

ಆದರೆ ಲಕ್ಷ್ಮಮ್ಮ ತಮಗೆ ಈ ಹಣ ಬೇಡಾ. ಬಡವರಾದ ನಮಗೆ ಹಣದ ಬೆಲೆಗೊತ್ತಿದೆ. ನಾವು ಮಾಡಿದ ಈ ಕೆಲಸದಿಂದ ನಮ್ಮ ಮಕ್ಕಳು ಎಲ್ಲಾದರೂ ಸುಖ [redacted] ಇದರಲ್ಲಿ ನನ್ನದೇನೂ ಹೆಚ್ಚುಗಾರಿಕೆ ಇಲ್ಲ, ಅಲ್ಲದೆ ನಮ್ಮ ಊರಿನವರು ಪ್ರಾಮಾಣಿಕರು ಎಂದು ನಮ್ಮ ಪುಟ್ಟಣ್ಣಯ್ಯ (ಪೋಸ್ಟ್ ಮಾಸ್ಟರ್ ಸತ್ಯನಾರಾಯಣ) ಯಾವಾಗಲೂ ಹೆಮ್ಮೆಯಿಂದ ಹೇಳುತ್ತಲೇ ಇರುತ್ತಾರೆ ಎಂದಾಗ ಸ್ಥಳದಲ್ಲಿದ್ದವರು ಮೂಕ ವಿಸ್ಮಿತರಾದರು.

ಈ ವಿಷಯ ಬಾಯಿಂದ ಬಾಯಿಗೆ ಹರಡಿದ್ದು ಲಕ್ಷ್ಮಮ್ಮ ಅವರನ್ನು ಊರಿನ ಶಾಲೆಯ ವಾರ್ಷಿಕೋತ್ಸವ ಸಂದರ್ಭದಲ್ಲಿ ದಲ್ಲಿ ಸನ್ಮಾನಿಸಲು ಗ್ರಾಮಸ್ಥರು

ಇಂದು ಸಂವಾದ ಕಾರ್ಯಕ್ರಮ

ಹಾಸನ:ಸೆ,8–ನಗರದ ಎಂ.ಜಿ. ರಸ್ತೆಯ ಲ್ಲಿರುವ ಮಹಿಳಾ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ ಹಾಗೂ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಸೆ.9 ರಂದು ಬೆಳಿಗ್ಗೆ 9.30 ಗಂಟೆಗೆ ಕಾಲೇಜಿನ ಕುವೆಂಪು ಸಭಾಂ ಗಣದಲ್ಲಿ ಸಂವಾದ ಕಾರ್ಯಕ್ರಮ ಕಾರ್ಯಕ್ರಮ ನಡೆಯಲಿದೆ.ಕಾರ್ಯಕ್ರಮವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಹುಲ್ ಕುಮಾರ್ ಶಹ’ಪುರವಾಡ್ ಉದ್ಘಾಟಿಸುವರು,

ಬಾಡಿಗೆಗೆ ದೊರೆಯುತ್ತದೆ

ಅಂಗಡಿ ಮಳಿಗೆ ಖಾಲಿ ಇದೆ
13.5 x13 ಅಳತೆಯ ಮಳಿಗೆ
ಬಾಡಿಗೆಗೆ ದೊರೆಯುತ್ತದೆ
ಹಾಸನಾಂಬ ವೃತ್ತ
ಗಣಪತಿ ದೇವಸ್ಥಾನದ ಎದುರು
ಸಂಪರ್ಕಿಸಿ : 9008501448
9972269251